**ಪಿ.ಡಬ್ಲ್ಯೂ-1**

ದಿನಾಂಕಃ **22-08-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರವಾಗಿ ಶ್ರೀ ಬಿ.ಎಂ.ಪಿ. ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಅರ್ಜಿ ಮತ್ತು ಪ್ರಮಾಣ ಪತ್ರಿಕೆಯಲ್ಲಿರುವ ವಿಷಯವನ್ನು ತಿಳಿದುಕೊಂಡಿಲ್ಲ. ಅಪಘಾತ ದಿಃ16-12-2022 ರಂದು ಆಗಿರುತ್ತದೆ. ಅಪಘಾತ ಆದ ನಂತರ ಬಾಣಾವರ ಆಸ್ಪತ್ರೆಯಲ್ಲಿ ನನ್ನನ್ನು ನೋಡದೇ ಇದ್ದ ಕಾರಣ ಅರಸೀಕೆರೆ ಆಸ್ಪತ್ರೆಗೆ ಬಂದು ಪ್ರಥಮ ಚಿಕಿತ್ಸೆ ಪಡೆದು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅರಸೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನಾನಾಗಲೀ ನಮ್ಮ ಕುಟುಂಬದವರಾಗಲೀ ಅಪಘಾತದ ಬಗ್ಗೆ ಹೇಳಿಲ್ಲ. ದೋಷಾರೋಪಣಾ ಪಟ್ಟಿ ಬಗ್ಗೆ ಓದಿ ತಿಳಿದುಕೊಂಡಿಲ್ಲ. ಅಪಘಾತವಾದ 1 ವಾರದ ನಂತರ ಪೋಲೀಸರಿಗೆ ದೂರು ಸಲ್ಲಿಸಿರುತ್ತೇನೆ. ನಾನು ಹಾಸನ ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ಅಪಘಾತವಾಗಿ 10 ದಿನಗಳ ಬಳಿಕೆ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಸದರಿ ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ 30 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಬಾಣಾವರದಿಂದ ಜಾವಗಲ್ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೆ. ಟಿ.ವಿ.ಎಸ್. ಎಕ್ಸ್ ಎಲ್ ವಾಹನದ ಚಾಲಕ ನನ್ನ ಎದುರುಗಡೆಯಿಂದ ಬರುತ್ತಿದ್ದ. ನಿಪಿ-6 ರಲ್ಲಿರುವ ಸ್ಕೆಚ್ ನಲ್ಲಿ ಅಪಘಾತವಾದ ಸ್ಥಳವನ್ನು ತೋರಿಸಿರುತ್ತಾರೆಂದರೆ ಸರಿ. ಅಪಘಾತ ಮಹೇಶ್ ರವರ ಮನೆಯ ಮುಂಭಾಗ ಆಗಿರುತ್ತದೆ. ಅಲ್ಲಿ ಹಾರ್ಡ್ ವೇರ್ ಅಂಗಡಿ ಇದೆಯೋ ಇಲ್ಲವೋ ಗೊತ್ತಿಲ್ಲ. ಆ ವಾಹನದ ಚಾಲಕ ನಿಧಾನವಾಗಿ ರಸ್ತೆಯ ಎಡಗಡೆ ಬರುತ್ತಿದ್ದ ನಾನು ಮದ್ಯಪಾನ ಮಾಡಿ ಏಕಾಏಕಿ ಆ ವಾಹನಕ್ಕೆ ಅಡ್ಡ ಬಂದಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಬಳಿ ಬಿ.ಪಿ.ಎಲ್. ಕಾರ್ಡ್ ಇದೆ. ಬಿ.ಪಿ.ಎಲ್. ಮತ್ತು ಆಧಾರ್ ಕಾರ್ಡ್ ಗಳನ್ನು ಹಾಜರುಪಡಿಸಿಲ್ಲ. ನನಗೆ ಈಗ 75 ವರ್ಷ ವಯಸ್ಸು ಎಂದರೆ ಸರಿಯಲ್ಲ. ನನಗೆ 65 ವರ್ಷ ವಯಸ್ಸು. ವೈದ್ಯಕೀಯ ದಾಖಲೆಗಳ ಪ್ರಕಾರ ನನಗೆ 75 ವರ್ಷ ವಯಸ್ಸಿಗೆ ಎಂದರೆ ಸರಿಯಲ್ಲ. ನನಗೆ ಉಚಿತವಾಗಿ ಚಿಕಿತ್ಸೆ ಕೊಡಲಾಗಿದೆ ಎಂದರೆ

ಸರಿಯಲ್ಲ. ನಾನು ಗಾರೆ ಕೆಲಸ ಮಾಡುತ್ತಿರಲಿಲ್ಲ ಹಾಗೂ ಯಾವುದೇ ಮೂಲಗಳಿಂದ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ನನ್ನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣಗಳಿಂದ ಎದುರುದಾರರ ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.**22-08-2025.**